**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

## ಸಿ.ಸಿ.ನಂ. 81/2021

| | | |
|---|---|---|
| ಸಾಕ್ಷಿದಾರರ ಹೆಸರು | : | ಸ್ವಾಮಿಗೌಡ |
| ತಂದೆಯ ಹೆಸರು | : | ಶಿವಶಂಕರ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಮ್ಯಾನೇಜರ್ ಚೌದರಿ ಫಾರಂ ಹೌಸ್ |
| ವಾಸಸ್ಥಳ | : | ಮೈಸೂರು. |

**ಸಾಕ್ಷಿಯನ್ನು ದಿನಾಂಕಃ 11.06.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನಾನು 2019 ರಿಂದ ಇಲ್ಲಿಯವರೆಗು ಜಿ.ಡಿ. ಚೌದರಿ ಫಾರಂ ಹೌಸ್ ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ.

ವಿಜಯಕುಮಾರ್ ಕುಚನೂರ್ ಮತ್ತು ಚನ್ನೇಗೌಡರವರು ಸ.ನಂ. 16/8, ಸ.ನಂ. 16/9, ಸ.ನಂ. 16/10, ಸ.ನಂ. 16/45 ರಲ್ಲಿ ಒಟ್ಟು 13 ಎಕರೆ ಜಮೀನನ್ನು ಕ್ರಯಕ್ಕೆ ಪಡೆದುಕೊಂಡು ನಂತರ ಸದರಿ ಜಮೀನಿಗೆ ಸಂಬಂಧಿಸಿದಂತೆ ಚಾಸಾ-1 ರವರಿಗೆ ಮುಖ್ತ್ಯಾರ್ ನಾಮೆ ಬರೆದುಕೊಟ್ಟಿರುತ್ತಾರೆ. ನಂತರ ಚಾಸಾ-1 ರವರು ತಮ್ಮ ಕೆಲಸದಾಳುಗಳಿಂದ ಈ ಮೇಲೆ ಹೇಳಿದ ಜಮೀನಿನ ಕೆಲಸ ಮಾಡಿಸುತ್ತಿದ್ದರು. ಚೌದರಿ ಫಾರಂ ಹೌಸ್ ಸ.ನಂ. 16/8 ರ ಜಮೀನಿನ ಪಕ್ಕದಲ್ಲಿರುತ್ತದೆ. ದಿನಾಂಕಃ 19.06.2020 ರಂದು ಬೆಳಿಗ್ಗೆ 10.45 ಗಂಟೆ

ಸಮಯದಲ್ಲಿ ನಾನು, ಚಾಸಾ-2 ಮತ್ತು ಚಾಸಾ-4 ಕೆಲಸ ಮಾಡುತ್ತಿದ್ದೆವು ಮತ್ತು ಚಾಸಾ-1 ರವರು ನಮ್ಮಗಳಿಂದ ಕೆಲಸ ಮಾಡಿಸುತ್ತಿದ್ದರು. ಆ ಸಂದರ್ಭದಲ್ಲಿ ಆರೋಪಿಗಳು ಬಂದು ಗಲಾಟೆ ಮಾಡಿ "ನಮ್ಮದೇ ಜಮೀನು, ನೀವೇಕೆ ಇಲ್ಲಿ ಬಂದಿದ್ದೀರಿ" ಎಂದು ಬೋಳೀಮಕ್ಕಳಾ, ಸೂಳೇಮಕ್ಕಳಾ ಎಂದು ಕೆಟ್ಟ ಮಾತುಗಳಿಂದ ಬೈದು ಇಲ್ಲಿ ಕೆಲಸ ಮಾಡಬೇಡಿ ಎಂದು ಜಮೀನಿನಿಂದ ನಮ್ಮನ್ನು ಹೊರಗಡೆ ತಳ್ಳಿರುತ್ತಾರೆ ಮತ್ತು ಇಲ್ಲಿ ಕೆಲಸ ಮಾಡಿದರೆ ಸರಿ ಬರುವುದಿಲ್ಲ, ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ನಂತರ ಚಾಸಾ-4 ಮತ್ತು ಚಾಸಾ-5 ಬಂದು ಗಲಾಟೆ ಬಿಡಿಸಿರುತ್ತಾರೆ. ನಂತರ ನಾವು ಪೋಲೀಸ್ ಠಾಣೆಗೆ ಬಂದು ದೂರು ನೀಡಿರುತ್ತೇವೆ. ಆ ದಿವಸ ಗಲಾಟೆ ಮಾಡಿದ ವ್ಯಕ್ತಿಗಳು ಈ ದಿನ ನ್ಯಾಯಾಲಯದ ಮುಂದಿರುತ್ತಾರೆ. ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ಆರೋಪಿಗಳು ನಾವು ಕೆಲಸ ಮಾಡುತ್ತಿದ್ದ ಜಮೀನಿಗೆ ಆಕ್ರಮವಾಗಿ ಪ್ರವೇಶ ಮಾಡಿ ನಮ್ಮನ್ನು ಅಡ್ಡಗಟ್ಟಿರುತ್ತಾರೆಂದರೆ ಸರಿ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ. ಡಿ.ಆರ್.ಎಂ. ವಕೀಲರಿಂದಃ**

ನಾನು ಎರಡನೇ ಪಿ.ಯು.ಸಿ. ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಮೂಲತಃ ಮೈಸೂರಿನವನು. ಚಾಸಾ-2 ನನಗೆ 14 ವರ್ಷಗಳಿಂದ ಪರಿಚಯವಿರುತ್ತಾರೆ. ಚಾಸಾ-2 ಮೂಲತಃ ಬಳ್ಳಾರಿಯವರು. ಆರೋಪಿಗಳನ್ನು

ಸುಮಾರು 04 ವರ್ಷಗಳಿಂದ ನೋಡುತ್ತಿದ್ದೇನೆ. ವಿಜಯಕುಮಾರ್ ಕುಚನೂರ್ ಮತ್ತು ಚನ್ನೇಗೌಡರವರು ಖರೀದಿಸಿರುವ ಜಮೀನಿನ ಕ್ರಯ ಕರಾರು ಪತ್ರವನ್ನು ನೋಡಿರುತ್ತೇನೆ. ಸದರಿ ಕ್ರಯದ ಕರಾರು ಪತ್ರ 2010 ರಲ್ಲಿ ಆಗಿರುತ್ತದೆ. ಕರಾರು ಪತ್ರವನ್ನು ಯಾರು ಮಾಡಿಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ಯಾವ ಜಮೀನಿನ ಚೆಕ್ ಬಂದಿಗೆ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ಜಮೀನಿನ ಸ್ವಾಧೀನ ಕೊಟ್ಟಿರುವ ಬಗ್ಗೆ ಕರಾರು ಪತ್ರದಲ್ಲಿ ನಮೂದಿಸಿರುತ್ತಾರೋ ಇಲ್ಲವೋ ನಾನು ನೋಡಿಲ್ಲ. ಜಿ.ಡಿ. ಚೌದರಿ ಫಾರಂ ಹೌಸ್ ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆಂದು ತೋರಿಸಲು ಬರವಣಿಗೆ ಮೂಲಕ ಬರೆದುಕೊಟ್ಟಿರುವುದಿಲ್ಲ. ದಶರಥ ಚೌದರಿ ಮತ್ತು ಆರೋಪಿಗಳ ನಡುವೆ ವಿವಾದಿತ ಸ್ವತ್ತಿಗೆ ಸಂಬಂಧಿಸಿದಂತೆ ಮೂಲ ದಾವೆ ಸಂಖ್ಯೆ 68/2020 ರಂತೆ ಹೆಚ್.ಡಿ. ಕೋಟೆ ನ್ಯಾಯಾಲಯದಲ್ಲಿ ದಾವೆ ವಿಚಾರಣೆಗಾಗಿ ಬಾಕಿ ಇರುತ್ತದೆ ಎಂದರೆ ಸರಿ. ದಶರಥ ಚೌದರಿ ಮತ್ತು ಅವರು ಕಡೆಯವರು ಆರೋಪಿಗಳ ಜಮೀನಿಗೆ ತೊಂದರೆ ಕೊಟ್ಟಿದ್ದರಿಂದ ಆರೋಪಿಗಳು ಶಾಶ್ವತ ನಿರ್ಬಂಧಕಾಜ್ಞೆಗಾಗಿ ದಾವೆ ಸಲ್ಲಿಸಿರುತ್ತಾರೆಂದರೆ ನಾವು ಕೂಡ ಸಲ್ಲಿಸಿರುತ್ತೇವೆ. ನಾವು ಸಲ್ಲಿಸಿರುವ ದಾವೆ ನಂಬರ್ ನನಗೆ ಗೊತ್ತಿಲ್ಲ. ಆರೋಪಿಗಳು ಸ್ವಾಧೀನದಲ್ಲಿರುವ ಜಮೀನು ಸರ್ಕಾರದಿಂದ ಮಂಜೂರಾಗಿರುವ ಜಮೀನಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ವಿಜಯಕುಮಾರ್ ಕುಚನೂರ್ ಮತ್ತು ಚನ್ನೇಗೌಡರವರು ಯಾವ ಜಮೀನನ್ನು ಕ್ರಯಕ್ಕೆ ಪಡೆದಿಲ್ಲ ಮತ್ತು ಆ ಜಮೀನಿನಲ್ಲಿ ಚಾಸಾ-1 ರವರು ಯಾವತ್ತೂ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 19.06.2020 ರಂದು ಆರೋಪಿಗಳು ಯಾವುದೇ ರೀತಿ ಗಲಾಟೆ ಮಾಡಿಲ್ಲ ಮತ್ತು ಯಾವ ಜಮೀನಿಗು

ಅತಿಕ್ರಮ ಪ್ರವೇಶ ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಸ್ವಾಧೀನದಲ್ಲಿರುತ್ತೇವೆ ಎಂದು ಹೇಳಿದ ಜಮೀನಿನ ಅಕ್ಕ-ಪಕ್ಕದಲ್ಲಿ ಇತರೇ ಜಮೀನಿನ ಮಾಲೀಕರು ಕೆಲಸ ಮಾಡುತ್ತಿರುತ್ತಾರೆಂದರೆ ಸರಿ. ಆರೋಪಿಗಳು ಮಲಾರದಹುಂಡಿ ಗ್ರಾಮದವರು ಎಂದರೆ 3 ಮತ್ತು 4 ನೇ ಆರೋಪಿಗಳು ಕರಿಗಳ ಗ್ರಾಮದವರು, 2 ನೇ ಆರೋಪಿ ಚಾಮನಹಳ್ಳಿಹುಂಡಿ ಗ್ರಾಮದವರು ಮತ್ತು 1 ನೇ ಆರೋಪಿ ಮಲಾರದಹುಂಡಿ ಗ್ರಾಮದವರು. ಆರೋಪಿಗಳು ವ್ಯವಸಾಯ ಮಾಡುತ್ತಿರುವ ಜಮೀನಿಗೆ ನಾವೇ ಕಾನೂನು ಬಾಹಿರವಾಗಿ ಹೋಗಿ ತೊಂದರೆ ಕೊಟ್ಟಿರುತ್ತೇವೆಂದರೆ ಸರಿಯಲ್ಲ. ನಾವು ಯಾವುದೇ ಜಮೀನಿನಲ್ಲಿ ಸ್ವಾಧೀನದಲ್ಲಿ ಇಲ್ಲದೇ ಇರುವುದರಿಂದ ಆರೋಪಿಗಳು ಅತಿಕ್ರಮ ಪ್ರವೇಶ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ಮತ್ತು ಚಾಸಾ-2 ನನಗೆ ಪರಿಚಯವಿರುವುದರಿಂದ ಅವರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಗಳನ್ನು ಜಮೀನಿನಿಂದ ಹೇಗಾದರು ಮಾಡಿ ಹೊರ ಹಾಕಬೇಕೆಂಬ ಉದ್ದೇಶದಿಂದ ರಾಜಕೀಯ ಮತ್ತು ಆರ್ಥಿಕ ಪ್ರಭಾವ ಬಳಸಿಕೊಂಡು ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>**ಮರು ವಿಚಾರಣೆ: ಇರುವುದಿಲ್ಲ**.</u>

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**